ಅಗತ್ಯವಿದ್ದಾಗ ಈ ಪಟ್ಟಿಯನ್ನು ಸಣ್ಣಗೆ ಸೀಳಿ, ನೀರಿನಲ್ಲಿ ನೆನಸಿ ಹೂವು ಕಟ್ಟಲು ಬಳಸಲಾಗುತ್ತಿತ್ತು. ಎಷ್ಟು ವರ್ಷಗಳಾದರೂ ಇದು ಹಾಳಾಗುತ್ತಿರಲಿಲ್ಲ. ಹಳ್ಳಿಗಳಲ್ಲಿ ಬಾಳೆ ಗಿಡಗಳು ಯಥೇಚ್ಛವಾಗಿ ಇರುತ್ತಿದ್ದುದರಿಂದ ಬಾಳೆ ನಾರಿಗೂ ಬರವಿರುತ್ತಿರಲಿಲ್ಲ.

ಹೂವು ಕಟ್ಟುವುದರಲ್ಲೂ ಅನೇಕ ವಿಧಗಳು. ಹಾಗೇ ಸರಳವಾಗಿ ಮಾಲೆ ಕಟ್ಟುವುದು ಒಂದು ವಿಧವಾದರೆ, ಕಾಲಿನ ಹೆಬ್ಬೆರಳಿಗೆ ಅಥವಾ ಕುರ್ಚಿ/ಮೇಜಿನ ಕಾಲಿಗೆ ದಾರ ಸುತ್ತಿ, ದಾರದ ಮಧ್ಯೆ ಹೂಗಳನ್ನು ಒಂದು ಬದಿ ಅಥವಾ ಎರಡೂ ಬದಿಗಳಲ್ಲಿ ಜೋಡಿಸಿ, ದಾರದ ಇನ್ನೊಂದು ತುದಿಯನ್ನು ಮೇಲಿನಿಂದ ತಂದು ಗಂಟು ಹಾಕಿ ದಂಡೆ ಕಟ್ಟುವುದು ಇನ್ನೊಂದು ವಿಧ. ತೊಟ್ಟಿನ ಸಮೇತ ಅಥವಾ ತೊಟ್ಟು ಕಿತ್ತು (ಸೇವಂತಿಗೆಯ ದಂಡೆ) ಕಟ್ಟುವ ಈ ರೀತಿಯ ದಂಡೆ ಹೆಂಗಸರ ತುರುಬಿಗೆ ಅಲಂಕಾರಪ್ರಾಯವಾಗಿರುತ್ತಿತ್ತು. ಮುತ್ತೈದೆ ಕೆನ್ನೆಗೆ ಅರಿಸಿನ, ಹಣೆಗೆ ಕುಂಕುಮದ ಬೊಟ್ಟು ಇಟ್ಟು ತುರುಬಿಗೆ ಮಲ್ಲಿಗೆ/ಸೇವಂತಿಗೆಯ ದಂಡೆ ಮುಡಿದು, ತುರುಬಿನ ಮಧ್ಯಕ್ಕೆ ಒಂದು ಗೆಜ್ಜೆಯ ಪಿನ್ನು ಸಿಕ್ಕಿಸಿದರೆ ನೋಡಲು ಬಹಳ ಸೊಗಸು; ಹಾಗೆಯೇ ಗೌರವವೂ ಮೂಡುವಂತಿರುತ್ತಿತ್ತು. ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ, ಮಂಗಳೂರು ಕಡೆಗಳಲ್ಲಿ ದೊರೆಯುವ ಮಂಗಳೂರು ಮಲ್ಲಿಗೆಯ ದಂಡೆಯ ಸೊಗಸೇ ಬೇರೆ! ಅದರ ಪರಿಮಳ, ಅದನ್ನು ಕಟ್ಟಿರುವ ಸೊಬಗು ಯಾವ ಸ್ತ್ರೀಯನ್ನೂ ಆಕರ್ಷಿಸದೆ ಬಿಡದು. ಸಣ್ಣ ಹೆಣ್ಣು ಮಕ್ಕಳಿಗೆ ತಲೆಯ ಮುಂಭಾಗದಿಂದ ಪ್ರಾರಂಭಿಸಿ ಜಡೆಯ ತುದಿಯವರೆಗೂ ಈ ದಂಡೆಯನ್ನು ಮುಡಿಸಿ ಅಲಂಕರಿಸಿ ಆನಂದ ಪಡುತ್ತಾರೆ. ಕೆಲವು ಕಡೆ ಗಂಡುಮಕ್ಕಳಿಗೂ ಚೌಲ ಹಾಗೂ ಉಪನಯನದ ಮೊದಲು ಹೆಣ್ಣು ಮಗುವಿನ ಹಾಗೆ ಲಂಗ ಹಾಕಿ/ಸೀರೆ ಉಡಿಸಿ, ಹಣೆಗೆ ಬೊಟ್ಟಿಟ್ಟು, ಕೈಗಳಿಗೆ ಬಳೆಗಳನ್ನು ಹಾಕುವುದರ ಜೊತೆಗೆ ಹೂವಿನ ಜಡೆಯನ್ನೂ ಹಾಕುವ ಸಂಪ್ರದಾಯವಿದೆ. ಹೂವಿನ ಜಡೆಗಾಗಿ ಬಳಸುವ ಹೂವು ಸಾಧಾರಣವಾಗಿ ಸುಗಂಧರಾಜ. ಇವುಗಳನ್ನು ತೆಳುವಾದ, ಹಗುರವಾದ ರಟ್ಟಿನ ಮೇಲೆ ಜೋಡಿಸಿ ಕಟ್ಟುತ್ತಾರೆ. ಮಧ್ಯೆ ಮಧ್ಯೆ ಪತ್ರೆ, ಗುಲಾಬಿ, ಸುನೇರಿ ಎಳೆಗಳನ್ನು ಅಲಂಕಾರಕ್ಕಾಗಿ ಜೋಡಿಸಿ ಕಟ್ಟುತ್ತಾರೆ. ತುದಿಯಲ್ಲಿ ಒಂದು ಕುಚ್ಚು ಕಟ್ಟಿರುತ್ತಾರೆ. ಇನ್ನು ಮದುವೆ, ಮುಂಜಿ ಇತ್ಯಾದಿ ಸಮಾರಂಭಗಳಲ್ಲಿ ಉಪಯೋಗಿಸುವ ದಪ್ಪವಾದ ಹಾರಗಳನ್ನು ಕಟ್ಟುವುದೇ ಬೇರೆಯ ವಿಧ.

ಗೊರಟೆ ಹೂವಿನಲ್ಲೂ ಬೇರೆ ಬೇರೆ ಬಣ್ಣದವು – ಅಚ್ಚ ಬಿಳಿ, ನೀಲಿ, ಹಳದಿ, ಗಾಢ ಗುಲಾಬಿ ಬಣ್ಣ, ತಿಳಿ ಗುಲಾಬಿ ಬಣ್ಣ, ನೀಲಿ ಬಣ್ಣದ ಹೂವಿನ ಮೇಲೆ ಬಿಳಿಯ ಗೆರೆ ಹೀಗೆ. ಅಬ್ಬಲಿಗೆಯಲ್ಲೂ ಹಳದಿ, ನಸುಕೆಂಪು, ತಿಳಿಗೆಂಪು, ನೀಲಿ ಬಣ್ಣಗಳಿವೆ. ಮಲ್ಲಿಗೆಯಲ್ಲಂತೂ ಹಲವಾರು ವಿಧಗಳು – ಕೆಂಪು ಕಾಕಡ, ಬಿಳಿ ಕಾಕಡ, ದುಂಡುಮಲ್ಲಿಗೆ, ಏಳುಸುತ್ತಿನ ಮಲ್ಲಿಗೆ, ಸೂಜಿಮಲ್ಲಿಗೆ, ಆಂಬೂರು ಮಲ್ಲಿಗೆ, ಮೈಸೂರ ಮಲ್ಲಿಗೆ (ಕವಿ ಕೆ.ಎಸ್.ನ. ನೆನಪಾಗುತ್ತಾರೆ), ಮಂಗಳೂರು ಮಲ್ಲಿಗೆ ಇತ್ಯಾದಿ. ಮಲ್ಲಿಗೆ, ಗೊರಟೆ, ಅಬ್ಬಲಿಗೆ ಹೂಗಳ ಮೊಗ್ಗುಗಳನ್ನು ಹಿಂದಿನ ಸಂಜೆಯೇ ಕೊಯ್ದು ತಂದು ಅವುಗಳನ್ನು ಸೂಜಿದಾರದಲ್ಲಿ ಪೋಣಿಸಿ ಮಾಲೆ ಮಾಡುತ್ತಿದ್ದೆವು. ಆಮೇಲೆ ರಾತ್ರಿಯಲ್ಲೇ ಅದನ್ನು ಬಾಳೆಯ ಎಲೆಯ ಮೇಲಿಟ್ಟು ಹೊರಗೆ ತುಳಸೀ ಕಟ್ಟೆಯ ಮೇಲೋ, ಅಡಿಕೆ ಚಪ್ಪರದ ಮೇಲೋ, ಚಪ್ಪರದ ಕಂಬಕ್ಕೋ, ಬಟ್ಟೆ ಒಣಹಾಕುವ ನ್ಯಾಲೆ(ತಂತಿ)ಯ ಮೇಲೋ ಇಬ್ಬನಿ ಬೀಳುವಂತೆ ಇಡುತ್ತಿದ್ದೆವು. ಮಾರನೆಯ ಬೆಳಿಗ್ಗೆ ಬಿಸಿಲು ಏರುವ ಮುನ್ನವೇ ಅದನ್ನು ನೋಡುವ ಸಂಭ್ರಮ! ಮಾಲೆಯಲ್ಲಿರುವ ಹೂಗಳು ತುಸುವೇ ಅರಳಿ ಮುದ್ದಾಗಿ ಕಾಣುತ್ತಿದ್ದವು. ಅದನ್ನು ಎರಡೂ ಜಡೆಗಳ ಉದ್ದಕ್ಕೂ (ಜಡೆಯೂ